ಅಧ್ಯಕ್ಷರು : ಬರುತ್ತದೆ, ನಾನು ಬರುವ ಹಾಗೆ ಮಾಡುತ್ತೇನೆ. ನಿಮ್ಮ ಸಂಶಯವನ್ನು ನಿವಾರಣೆ ಮಾಡುತ್ತೇನೆ.

ಗಂಗಮತಸ್ಥರು : ಬೆಸ್ತರು ಇವರನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸುವ ಕುರಿತು.

1356 - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇತ್ತೀಚೆಗೆ ಗಂಗಮತಸ್ಥರು : ಬೆಸ್ತರು ಇವರನ್ನು ಪರಿಶಿಷ್ಟ ಪಂಗಡ ಪಟ್ಟಿಯಲ್ಲಿ ಸೇರಿಸಲು ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ.

ಆ) ಹಾಗಿದ್ದಲ್ಲಿ ಪರಿಶಿಷ್ಟ ಪಂಗಡಕ್ಕೆ ಸೇರಲು ಎಲ್ಲಾ ಅರ್ಹತೆಯನ್ನು ಕೇಂದ್ರ ಸರ್ಕಾರ ಸೂಚಿಸಿರುವ ಮಾರ್ಗಸೂಚಿಯ ಪ್ರಕಾರ ಈ ಜನಾಂಗ ಅರ್ಹತೆ ಪಡೆದಿದ್ದಾರೆಯೇ, ಹಾಗಿದ್ದಲ್ಲಿ ಅರ್ಹತೆಯ ವಿವರ ತಿಳಿಸುವುದು.

ಇ) 1991ರ ಜನಗಣತಿಯ ಸಮೀಕ್ಷೆ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಎಷ್ಟು ಲಕ್ಷ ಮಂದಿ ಪರಿಶಿಷ್ಟ ಪಂಗಡದವರಿದ್ದಾರೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಗಂಗಾಮತಸ್ಥರು ಹಾಗೂ ಬೆಸ್ತರನ್ನು ಪರಿಶಿಷ್ಟ ಪಂಗಡವೆಂದು ಪರಿಗಣಿಸಲು ಇದುವರೆವಿಗೂ ಯಾವುದೇ ಸರ್ಕಾರಿ ಆದೇಶ ಹೊರಡಿಸಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) 1991ರ ಜನಗಣತಿಯ ಪ್ರಕಾರ, ಕರ್ನಾಟಕ ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಜನಸಂಖ್ಯೆ 19.15 ಲಕ್ಷ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಯವರು ಪರಿವಾರ ಸಮಾಜದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಸಭೆಯಲ್ಲೂ ಕೂಡ ಬಹಳಷ್ಟು ವಿಷಯ ಇದರ ಬಗ್ಗೆ ಚರ್ಚೆಯಾಗಿದೆ. ಪರಿವಾರ ಸಮಾಜದವರನ್ನು ಸೇರಿಸಬೇಕೆನ್ನುವಂತಹ ಒಂದು ವಿಷಯ ಚರ್ಚೆಯಾದ ನಂತರ, ಮತ್ತೆ ಮಾನ್ಯ ಮುಖ್ಯಮಂತ್ರಿಯವರು ಕೂಡ ಕೆಲವಾರು ಸಂದರ್ಭದಲ್ಲಿ ಸೇರಿಸುತ್ತೇವೆಂದು ಹೇಳಿದ್ದಾರೆ. 'ಪರಿವಾರ' ಎನ್ನುವುದು ನನಗೆ ತಿಳಿದಮಟ್ಟಿಗೆ ಅದು ಒಂದು ಸಮುದಾಯ, ಯಾವುದೇ ಜಾತಿ ಅಲ್ಲ. ಈ ಪರಿವಾರ ಎನ್ನತಕ್ಕಂಥ ಪದವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿದರೆ, ಲಕ್ಷಾಂತರ ಜನರು ಈ ಪರಿವಾರ ಸಮುದಾಯದ ಕೆಳಗಡೆ ಬರುವಂತಹ ಜಾತಿಗಳು ಎಲ್ಲಾ ಪರಿಶಿಷ್ಟ ಪಂಗಡಕ್ಕೆ ಬರುತ್ತವೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದು ಸರ್ಕಾರದ ಗಮನಕ್ಕೆ ಬಂದಿದ್ದರೆ ಈ ಪರಿವಾರ ಸಮುದಾಯದ ಅಡಿ ಎಷ್ಟು ಜಾತಿಗಳು ಬರುತ್ತದೆ. ಸುಮಾರು ಎಷ್ಟು ಲಕ್ಷ ಜನರನ್ನು ಪರಿಶಿಷ್ಟ ಪಂಗಡಕ್ಕೆ ನೀವು ಸೇರಿಸಬೇಕೆಂದು ಹೊರಟಿದ್ದೀರಿ. ಈಗ ಪ್ರತಿಶತ ಮೀಸಲಾತಿ ಶೇ. 3ರಷ್ಟು ಮಾತ್ರ ಕೊಟ್ಟಿದ್ದೀರಿ. ಇಷ್ಟು ಜನಾಂಗವನ್ನು ಇಷ್ಟು ಲಕ್ಷ ಅಧಿಕವಾಗಿ ಸೇರಿಸುವುದರಿಂದ ತಾವು ಮತ್ತೆ ಏನಾದರೂ ಮೀಸಲಾತಿಯ ಪ್ರಮಾಣವನ್ನು ಜಾಸ್ತಿ ಮಾಡುತ್ತಿರಾ? ಇದು ನನ್ನ ಪ್ರಶ್ನೆ.

ಅಧ್ಯಕ್ಷರು : ನಿಮ್ಮ 'ಅ' ಪ್ರಶ್ನೆಯಲ್ಲಿ ಗಂಗಾಮತಸ್ಥರು ಮತ್ತು ಬೆಸ್ತರು ಇವರನ್ನು ಸೇರಿ ಸಿಲ್ಲವೆಂದು ಹೇಳಿದ ಮೇಲೆ ಬೇರೆ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಭಾವನೆ ನನಗೆ ಅರ್ಥವಾಗಿದೆ. ಈಗ ಬೇರೆ ಬೇರೆ ಸಮಾಜಗಳನ್ನು ಪುನಃ ಎಸ್.ಟಿ. ಲಿಸ್ಟ್‌ನಲ್ಲಿ ಸೇರಿಸುವುದರಿಂದ ನಿಜವಾದ ಎಸ್.ಟಿಗಳಿಗೆ ತೊಂದರೆಯಾಗುತ್ತದೆ ಎಂಬ ಅವರ ಭಾವನೆಯನ್ನು ಅರ್ಥ ಮಾಡಿಕೊಂಡಿದ್ದೇನೆ. ಆದರೆ ನಾನು ಉತ್ತರದಲ್ಲಿ ಇದ್ಯಾವುದನ್ನು ಸೇರಿಸಿಲ್ಲವೆಂದು ಹೇಳಿದ್ದೇನೆ.

ಅದನ್ನು ಸೇರಿಸುವುದು ಮತ್ತು ಶೇಕಡವಾರು ಫಿಕ್ಸ್ ಮಾಡುವುದು, ನಮ್ಮ ರಾಜ್ಯ ಸರ್ಕಾರದ ಕಡೆ ಇಲ್ಲ. ಇದೆಲ್ಲಾ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವಂತಹ ವಿಷಯವಾಗಿದೆ. ನಾನೂ ಸಹ ಹೇಳಿದ್ದೇನೆ. ಈಗ ಸದ್ಯಕ್ಕೆ ನಾವು ಯಾವುದು ಸೇರಿಸಿಲ್ಲವೆಂದು ಹೇಳಿದ್ದೇನೆ.

ವಿಜಾಪುರ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ದೊರೆತ ಸೌಲಭ್ಯಗಳು

715 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿಜಾಪುರ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಜಾತಿಯವರಿಗೆ ನೀಡಿದ ಸಹಾಯ ಸೌಲಭ್ಯಗಳೇನು? (ಮೂರು ವರ್ಷಗಳ ವಿವರ ಒದಗಿಸುವುದು)

ಆ) ಯಾವ ಯಾವ ಯೋಜನೆ ಅಡಿಯಲ್ಲಿ ಸಹಾಯ ಮಾಡಲಾಗಿದೆ, ಸಂಪೂರ್ಣ ವಿವರ ನೀಡುವುದು ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ಮತ್ತು ಆ) ಸಮಾಜ ಕಲ್ಯಾಣ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಬಿಜಾಪುರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗದವರಿಗೆ ನೀಡಿದ ಸಹಾಯ : ಸೌಲಭ್ಯಗಳು ಹಾಗೂ ಯೋಜನಾ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.